# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
# ಆಹಾರ ವಿಶ್ಲೇಷಣಾ ಪ್ರಯೋಗಶಾಲೆ

## ಮಾಹಿತಿ ಹಕ್ಕು ಕಾಯ್ದೆ – 2005 ಸೆಕ್ಷನ್ 4ರ ಅನ್ವಯ ಪ್ರಕಟಿಸಿದ್ದು

1. ಆಹಾರ ವಿಶ್ಲೇಷಣಾ ಪ್ರಯೋಗಶಾಲೆ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು:

√ ಕಛೇರಿಯ ಹೆಸರು : ಆಹಾರ ವಿಶ್ಲೇಷಣಾ ಪ್ರಯೋಗಾಲಯ
ಹರ್ಬನ್ ಹೆಲ್ತ್ ಸೆಂಟರ್
ಎಸ್.ಜೆ.ಪಿ. ರಸ್ತೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು – 02

√ ರಚನೆ :



**√ ಆಹಾರ ವಿಶ್ಲೇಷಣಾ ಪ್ರಯೋಗಶಾಲೆ ಕಛೇರಿಯ ಕರ್ತವ್ಯಗಳು,**

ಆಹಾರ ಕಲಬೆರಕೆ ನಿಯಂತ್ರಣ ವಿಭಾಗ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಒಂದು ಪ್ರಮುಖವಾದ ವಿಭಾಗವಾಗಿರುತ್ತದೆ

ಈ ವಿಭಾಗವು 1954ರ ಪಿ.ಎಫ್.ಎ. ಕಾಯಿದೆ 1954 ನಿಯಮ 1955ರ ಕೇಂದ್ರ ಶಾಸನದ ನಿಯಮ ಹಾಗೂ ಕರ್ನಾಟಕ ರಾಜ್ಯದ ಪಿ.ಎಫ್.ಎ. ನಿಯಮ 1986ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ.

ಈ ಕಾನೂನಿನ ಅಡಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 30 ವಲಯಗಳಾಗಿ ವಿಂಗಡಿಸಿ ಪ್ರತಿ ವಲಯದ ಆರೋಗ್ಯ ವೈದ್ಯಾಧಿಕಾರಿಗಳ ಅಡಿಯಲ್ಲಿ ಒಬ್ಬ ಆಹಾರ ಪರಿವೀಕ್ಷಕರನ್ನು ನೇಮಿಸಿ ಎಲ್ಲಾ ಆಹಾರ ಘಟಕಗಳನ್ನು ತಪಾಸಣೆ ಮಾಡಿ ಅನುಮಾನ ಆಸ್ಪದ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಅವುಗಳನ್ನು ಬೆಂಗಳೂರು ಮಹಾನಗರ ಪಾಲಿಕೆಯ ಪ್ರಯೋಗಾಲಯದಲ್ಲಿ ಪರೀಕ್ಷೆ ಕಳುಹಿಸಿ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು ಕಲಬೆರಕೆಯಾಗಿದೆ ಎಂದು ಧೃಡಪಡಿಸಿದ ಆಹಾರ ಮಾದರಿಗಳ ವರ್ತಕರ ಮೇಲೆ ಸಂಬಂದ ಪಟ್ಟ ನ್ಯಾಯಾಲಯದಲ್ಲಿ ದಾವೇ ಹೂಡಿ ಕಾನೂನು ಅನುಗುಣವಾಗಿ ಶಿಕ್ಷೆ ವಿಧಿಸಲು ನ್ಯಾಯಾದೀಶರ ಮುಂದೆ ವಿನಂತಿಸಲಾಗುವುದು.

ಈ ಮೇಲಿನ ಎಲ್ಲಾ ಕಾರ್ಯಚಾರಣೆಯು ಬೆಂಗಳೂರು ಮುಖ್ಯ ಆರೋಗ್ಯಾಧಿಕಾರಿಯವರ ಮೇಲ್ವಿಚಾರಣೆಯಲ್ಲಿ ದಾವೇ ಹೂಡಲು ಉಪ ಆಯುಕ್ತರು (ಆರೋಗ್ಯ) ರವರಿಂದ ಕಾನೂನಿನ ರೀತಿ ಅನುಮತಿ ಪಡೆದು ಸಂಬಂಧ ಪಟ್ಟ ವರ್ತಕರ ಮೇಲೆ ದಾವೇ ಹುಡಲಾಗುವುದು.

ಮುಖ್ಯ ಆರೋಗ್ಯಾಧಿಕಾರಿಗಳು ಆಹಾರ ಪರೀವಿಕ್ಷಕರ ವರಧಿಯ ಮೇರೆಗೆ ಎಲ್ಲಾ 30 ವಲಯಗಳಲ್ಲಿ ಆಹಾರ ತಯಾರಕರು, ಮಾರಾಟಗರರು, ವಿತರಣೆ ಮಾಡುವುದಾಗಲ್ಲಿ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ರವಾನಿಸುವುದಾಗಲ್ಲಿ, ಅಥವಾ ಸಗಟು ವಿತರಣೆ ಶೇಖರಣೆ ಮಾಡುವುದಾಗಲ್ಲಿ, ಅಥವಾ ಚಿಲ್ಲರೆ ವ್ಯಾಪಾರ ಮಾಡುವುದಾಗಲ್ಲಿ ಎಲ್ಲಾ ಆಹಾರ ವರ್ತಕರಿಗೂ ಪಿ.ಎಫ್.ಎ. ಕಾಯಿದೆ ಅಡಿಯಲ್ಲಿ ಆಹಾರ ಪರವನೆಗಳನ್ನು ಹೊಸದಾಗಿ ಅಥವಾ ಪ್ರತಿ ವರ್ಷ ನವೀಕರಿಸುವುದು ಇದರಿಂದ ಬೆಂಗಳೂರು ಮಹಾನಗರ ಪಾಲಿಕೆಯ ಖಜಾನೆಗೆ ಪ್ರತಿ ವರ್ಷ 6 ಲಕ್ಷದಿಂದ 7 ಲಕ್ಷದವರೆಗೂ ಸಂಗ್ರಹವಾಗುತ್ತದೆ

ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಅಡಿಯಲ್ಲಿ ಆಹಾರ ಪದ್ದಾರ್ಥಗಳನ್ನು ತಯಾರು ಮಾಡಿರುವ ಮಾಲೀಕರು ಇಚ್ಚೆ ಪಟ್ಟಲ್ಲಿ ಆಹಾರ ವಿಶ್ಲೇಷಣಾಧಿಕಾರಿಗಳು ವಿಶ್ಲೇಷಣೆ ಮಾಡಿ ತಿಳಿಸುವುದಕ್ಕೆ ಪ್ರತಿ ಆಹಾರ ಪದ್ದಾರ್ಥಗಳಿಗೆ ವಿಶ್ಲೇಷಣೆಯ ಶುಲ್ಕ 100–00ರೂ.ಗಳನ್ನು ಖಜಾನೆ ತುಂಬಿ ವಿಶ್ಲೇಷಣೇಯ ವರಧಿಯನ್ನು ಪಡೆಯಲು ಅವಕಾಶವಿದೆ

ಹಾಗೂ ಮೇಲಿನ ಕಾನೂನು ವ್ಯಾಪ್ತಿಯ ಕಾರ್ಯಗಳ ಜೊತೆಗೆ ಇತರೆ ದೇಶ ವಿದೇಶಗಳಿಂದ ಬೆಂಗಳೂರು ಮಹಾನಗರಕ್ಕೆ ಆಡಳಿತಾತ್ಮಕ ವಿಷಯದ ಬಗ್ಗೆ ಗಣ್ಯ ವ್ಯಕ್ತಿಗಳು ಬಂದಾಗ ಹಾಗೂ ನಮ್ಮ ದೇಶದ ಅದ್ಯಕ್ಷರು, ಉಪ ಅದ್ಯಕ್ಷರು, ಹಾಗೂ ಪ್ರದಾನಿಮಂತ್ರಿಗಳು ನಗರಕ್ಕೆ ಬಂದಾಗ ಅವರುಗಳು ಉಪಯೋಗಿಸುವ ಆಹಾರ ಪದ್ದಾರ್ಥಗಳನ್ನು ಸಂಗ್ರಹಿಸಿ ಮುಂದಿನ ಪರೀಕ್ಷೆಗಳಿಗಾಗಿ ಆಹಾರ ಪದ್ದಾರ್ಥಗಳನ್ನು ಪ್ರಯೋಗಶಾಲೆಯ ಶೀತ ಕೊಠಡಿಯಲ್ಲಿ ಸಂಗ್ರಹಿಸಿ ಮುಂದಿನ ಸೂಕ್ತ ವಿಶ್ಲೇಷಣೆಗಾಗಿ ಇರಿಸುವುದು. ಇದನ್ನು ಬರುವಂತಹ ಗಣ್ಯ ವ್ಯಕ್ತಿಗಳ ಆರೋಗ್ಯ ದೃಷ್ಟಿಯಿಂದ ಕೇಂದ್ರ ಸರ್ಕಾರದ Blue Book ಆಧಾರದ ಮೇಲೆ ಕಾರ್ಯಚಾರಣೆ ಮಾಡಲಾಗುವುದು

2. **ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು:–**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಕರ್ತವ್ಯಗಳು |
|---|---|---|
| 1 | **ಮುಖ್ಯ ರಾಸಾಯನಿಕ ತಜ್ಞರು ಹಾಗೂ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು** **ಶ್ರೀ ನಾಗರಾಜು ಎಸ್.ಬಿ** | ಬೆಂಗಳೂರು ಮಹಾನಗರ ಪಾಲಿಕೆಯ ಆಹಾರ ಪ್ರಯೋಗಾಲಯಕ್ಕೆ ಮುಖ್ಯಸ್ಥರಾಗಿರುತ್ತಾರೆ ಪಿ.ಎಫ್.ಎ ಪ್ರಸ್ತುತವಾದ ಎಲ್ಲಾ ಅಧಿಕಾರ ಹೊಂದಿರುತ್ತಾರೆ ಹಾಗೂ ಕಛೇರಿಯ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅಧಿಕಾರವನ್ನು ಹೊಂದಿರುತ್ತಾರೆ |
| 2 | **ದ್ವಿತೀಯ ದರ್ಜೆ ಗುಮಾಸ್ತರು** **ಇಕ್ಬಾಲ್** | ತಾವು ಕಾರ್ಯ ನಿರ್ವಹಿಸುವ ಕಛೇರಿಗಳಲ್ಲಿ ಆ ಕಛೇರಿಗೆ ಸಂಬಂಧಿಸಿದ ಬಟವಾಡೆ ಅಧೀನದ ಹಾಗೂ ಕಛೇರಿಗೆ ಸಂಬಂಧಿಸಿದ ಕೆಲಸ ನಿರ್ವಹಿಸುವುದು ಹಾಗೂ ಮೇಲಾಧಿಕಾರಿಗಳು ಸೂಚಿಸುವ ಮಾಹಿತಿಗಳನ್ನು ಕಾಲ ಕಾಲಕ್ಕೆ ಒದಗಿಸುವುದು. ಆಹಾರ ಮಾದರಿಗಳನ್ನು ಸ್ವೀಕರಿಸುವುದು |
| 3 | **ನಾಲ್ಕನೇ ದರ್ಜೆ ಗುಮಾಸ್ತರು** ಎನ್. ಕೃಷ್ಣೋಜಿ ರಾವ್ ಕೇಶವ ಮೂರ್ತಿ ಜಯಮ್ಮ ನರಸಿಂಹಮೂರ್ತಿ ಆರ್ ನಾಗರಾಜ್ ಮೂರ್ತಿ ಎನ್ | ಆ ಕಛೇರಿಗಳಲ್ಲಿ ಅಧಿಕಾರಿಗಳು ತಿಳಿಸುವ ಕೆಲಸವನ್ನು ನಿರ್ವಹಿಸುವುದು ಹಾಗೂ ಟಪಾಲು ರವಾನಿಸುವ ಕೆಲಸ ಕಾರ್ಯಗಳು ದಿನಕ್ಕೆರಡು ಬಾರಿ ಕಛೇರಿಯಲ್ಲಿ ಕಸಗುಡಿಸಿ, ನೆಲ ಒರೆಸಿ ಸ್ವಚ್ಛಗೊಳಿಸುವುದು |

3. **ಮೇಲ್ವಿಚಾರಣ ಮತ್ತು ಜವಾಬ್ದಾರಿಗಳನ್ನು ಒಳಗೊಂಡಂತೆ ತೀರ್ಮಾನ ಕೈಗೊಳ್ಳುವಲ್ಲಿ ಅನುಸರಿಸುವ ಕ್ರಮಗಳು:–**

ಪ್ರಯೋಗಾಲಯದಲ್ಲಿ ಆಹಾರ ಪರೀವೀಕ್ಷಕರಿಂದ ಹಾಗೂ ಸ್ವೀಕೃತವಾಗಿ ಬಂದಿರುವ ಆಹಾರ ಮಾದರಿಗಳನ್ನು ಕಛೇರಿಯಲ್ಲಿ ಅಂದರೆ 40 ದಿನಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಸಂಬಂಧಪಟ್ಟ ಮೇಲಾಧಿಕಾರಿ ಹಾಗೂ ನಾನ್ ವೆಜ್ ವಿಶ್ಲೇಷಣೆ ವರದಿಯನ್ನು ಪಿ.ಎಫ್.ಎ. ನಿಯಮ 7ರಲ್ಲಿ ಪರಿಶೀಲಿಸಲಾಗುವುದು ಹಾಗೂ ಮುಂದಿನ ಸೂಕ್ತ ಕ್ರಮ ಜರುಗಿಸಲು ವಹಿಸಿದೆ ತಮಗೆ ನೀಡಿರುವ ವ್ಯಾಪ್ತಿಯಲ್ಲಿ ಮೇಲಧಿಕಾರಿಗಳು ಹೆಚ್ಚಿನ ವ್ಯಾಪ್ತಿಯಲ್ಲಿ.

4. **ಕಾರ್ಯ ನಿರ್ವಹಿಸುವಲ್ಲಿ ಅನುಸರಿಸುವ ಮಾನದಂಡಗಳು:–**

1954ರ ಕಾಯಿದೆಯ ಅಥವಾ ಡಿ.ಜಿ.ಹೆಚ್.ಎಸ್, ಐ.ಎಸ್.ಐ ವಿಶ್ಲೇಷಣೆಗೆ ಅನುಸರಿಸುವ ಎಲ್ಲಾ ಆಹಾರ ಪದ್ಧಾರ್ಥಗಳು ವಿಶ್ಲೇಷಣೆಗೆ ಒಳಪಡಿಸುವುದು ಹಾಗೂ ಮುಖ್ಯ ಆರೋಗ್ಯಾಧಿಕಾರಿಗಳಿಗೆ ಕಾಲಕಾಲಕ್ಕೆ ನೀಡುವ ಕ್ರಮ ವಹಿಸುವುದು

5. **ಅದರ ಕಾರ್ಯಗಳನ್ನು ನೆರವೇರಿಸುದಕ್ಕಾಗಿ ಅದು ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಅಥವಾ ಅದರ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳನ್ನು:–**

ಅ) ಪಿ.ಎಫ್.ಎ. ಕಾಯಿದೆ 1954 (ಕೇಂದ್ರ)
ಆ) ಪಿ.ಎಫ್.ಎ ನಿಯಮ 1955 (ಕೇಂದ್ರ)
ಇ) ಪಿ.ಎಫ್.ಎ ಕಾಯಿದೆ 1986 (ರಾಜ್ಯ)
ಹಾಗೂ ಮುಖ್ಯ ಆರೋಗ್ಯಾಧಿಕಾರಿಗಳು ಹಾಗೂ ಉಪ ಆಯುಕ್ತರು (ಆರೋಗ್ಯ) ಹಾಗೂ ಮಾನ್ಯ ಆಯುಕ್ತರು ನೀಡುವ ಸೂಚನೆ

**6. ಇಲಾಖೆ ಹೊಂದಿರುವ ದಸ್ತಾವೇಜುಗಳ ಪಟ್ಟಿ:-**

ಅ) ಸ್ಟಾಕ್ ಪುಸ್ತಕ
ಆ) ಹಾಜರಾತಿ ಪುಸ್ತಕ
ಇ) ಬಟವಾಡೆ ವಹಿ
ಈ) ನಗದು ಪುಸ್ತಕ
ಉ) ಪಿ.ಆರ್. ಪುಸ್ತಕ

**7. ಅದರ ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು:-**

ಈ ಕಛೇರಿಗೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಂಪರ್ಕವಿರುವುದಿಲ್ಲ

**8. ಮಂಡಳಿಗಳು, ಷರತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಢವಳಿಗಲು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬಿದರ ವಿವರ ಪಟ್ಟಿಕೆಯನ್ನು:-**

ಅನ್ವಯಿಸುವುದಿಲ್ಲ

**9. ಆರೋಗ್ಯಾಧಿಕಾರಿ ಕೇಂದ್ರದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ನಿರ್ದೇಶಿಕೆ**

| ಕ್ರ. ಸಂ. | ಹೆಸರು ಮತ್ತು ಹುದ್ದೆ | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 1 | **ಮುಖ್ಯ ರಾಸಾಯನಿಕ ತಜ್ಞರು ಹಾಗೂ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು**<br>ಶ್ರೀ ನಾಗರಾಜ ಎಸ್.ಬಿ | ಆಹಾರ ವಿಶ್ಲೇಷಣಾ ಪ್ರಯೋಗಾಲಯ<br>ಹರ್ಬನ್ ಹೆಲ್ತ್ ಸೆಂಟರ್<br>ಎಸ್.ಜೆ.ಪಿ. ರಸ್ತೆ<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು – 02 | 22975854 |
| 2 | **ದ್ವಿತೀಯ ದರ್ಜೆ ಗುಮಾಸ್ತರು**<br>ಇಕ್ಬಾಲ್ (ಓ.ಡಿ) | | |
| | **ನಾಲ್ಕನೇ ದರ್ಜೆ ಗುಮಾಸ್ತರು**<br>ಎನ್. ಕೃಷ್ಣೋಜಿ ರಾವ್ | | |
| | ಕೇಶವ ಮೂರ್ತಿ | | |
| | ಜಯಮ್ಮ<br>ಎನ್. ನಾಗರಾಜ ಮೂರ್ತಿ<br>ನರಸಿಂಹ ಮೂರ್ತಿ ಆರ್ | | |

10. ನಿಯಮಾನುಸಾರ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಪಡೆಯುತ್ತಿರುವ ಮಾಸಿಕ ವೇತನದ ವಿವರಗಳು.

| ಕ್ರ. ಸಂ. | ಹೆಸರು ಮತ್ತು ಹುದ್ದೆ | ವೇತನ ಶ್ರೇಣಿ | ಮೂಲ ವೇತನ |
|---|---|---|---|
| 1 | <u>ಮುಖ್ಯ ರಾಸಾಯನಿಕ ತಜ್ಞರು</u><br><u>ಹಾಗೂ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು</u><br>ಶ್ರೀ ನಾಗರಾಜ ಎಸ್.ಬಿ | Nil | I/C |
| 2 | **ದ್ವಿತೀಯ ದರ್ಜೆ ಗುಮಾಸ್ತರು**<br>ಇಕ್ಬಾಲ್ | OOD | OOD |
| 3 | **ನಾಲ್ಕನೇ ದರ್ಜೆ ಗುಮಾಸ್ತರು**<br>ಎನ್. ಕೃಷ್ಣೋಜಿ ರಾವ್ | 5200–8200 | 9200 |
| 4 | ಕೇಶವ ಮೂರ್ತಿ | 4800–7275 | 6125 |
| 5 | ಜಯಮ್ಮ | 5200–8200 | 7625 |
| 6 | ಎನ್. ನಾಗರಾಜ್ ಮೂರ್ತಿ | 4800–7275 | 4900 |
| 7 | ಆರ್. ನರಸಿಂಹ ಮೂರ್ತಿ | 4800–7275 | 5300 |

11. 2005–06ನೇ ಯಾವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆಯಡಿಯಲ್ಲಿ ನಿಗದಿ ಪಡೆಸಲಾದ ಅನುದಾನ ವಿವರಗಳು

ಯಾವುದು ಇಲ್ಲ

12. ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನವನ್ನು ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:–

ಯಾವುದು ಇಲ್ಲ

13. ಅದು ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾ ಅಧಿಕಾರಿ ಪತ್ರಗಳನ್ನು ಪಡೆಯುವವರ ವಿವರಗಳನ್ನು:–

ಯಾವುದು ಇಲ್ಲ

14. ಅದರ ಬಳಿ ಲಭ್ಯವಿರುವ ಅಥವಾ ಅದು ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರಗಳನ್ನು:–

ಯಾವುದು ಇಲ್ಲ

**15. ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:–**

ಯಾವುದು ಇಲ್ಲ

**16. ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳು ಮತ್ತು ಇತರ ವಿವರಗಳನ್ನು**

ಜೇಮ್ಸ್ ಅಲೆಗ್ಸಾಂಡರ್
ಮುಖ್ಯ ರಾಸಾಯನಿಕ ತಜ್ಞರು
ಹಾಗೂ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**17. ನಿಯಮಿಸಬಹುದಾದಂತಹ ಇತರ ಮಾಹಿತಿಯನ್ನು ಪ್ರಕಟಿಸತಕ್ಕದ್ದು ಮತ್ತು ತರುವಾಯ ಪ್ರತಿವರ್ಷ ಪ್ರಕಟನೆಗಳನ್ನು ಅಂದಿನವರೆಗೆ ಪರಿಷ್ಕರಿಸತಕ್ಕದ್ದು:–**

ಪಾಲಿಕೆ ವತಿಯಿಂದ ಯಾವುದಾದರೂ ಮಾಹಿತಿಗಳನ್ನು ನಿಗಧಿಗೊಳಿಸಿದಲ್ಲಿ ಅದನ್ನು ಅಳವಡಿಸಲಾಗುವುದು.

ಶ್ರೀ ನಾಗರಾಜ್ ಎಸ್.ಬಿ (ಐ.ಸಿ)
ಮುಖ್ಯ ರಾಸಾಯನಿಕ ತಜ್ಞರು
ಹಾಗೂ ಸಾರ್ವಜನಿಕ ವಿಶ್ಲೇಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು